ಅವನ ಕಷ್ಟ ಸುಖದಲ್ಲಿ ಪತ್ನಿಯಾದವಳು ಭಾಗಿಯಾಗಬೇಕಾಗುತ್ತದೆ. ಅವನ ಅಂತರಂಗದ ಭಾವಗಳು ಹಣೆಯಮೇಲೆ ಹಣತೆಯಂತೆ ಪ್ರಜ್ವಲಿಸಿದಾಗ ಹಣತೆಯ ಕುಡಿಯ ಮಸಿಯನ್ನು ಕೊಡವಬೇಕಾಗುತ್ತದೆ. ಅವನ ಕಣ್ಣುಗಳು ಭೋರ್ಗರೆಯುತ್ತಾ ಬಂಜರು ಭೂಮಿಯಾದಾಗ ಅವನ ಕಣ್ಣಿನ ತೇವವನ್ನು ಮರಳಿಸಬೇಕಾಗುತ್ತದೆ ಎಂದು ನನಗೆ ವ್ಯಕ್ತವಾಗಿ ಅವ್ಯಕ್ತವಾಗಿ ಸೂಚನೆಗಳನ್ನು ನೀಡಲಾಗುತ್ತಿತ್ತು.

ಬರುವವರು ಬರುತ್ತಾರೆ; ಹೋಗುವವರು ಹೋಗುತ್ತಾರೆ. ಬಾರದೆ ಇರುವವನ ನಿರೀಕ್ಷೆ ಪ್ರತಿ ಹೆಜ್ಜೆ ಸಪ್ಪಳದೊಂದಿಗೆ, ಮಿಣುಕು ಹುಳವಿನ ಪ್ರತಿ ಮಿಡಿತದೊಂದಿಗೆ, ನವಿಲುಗರಿಯ ಪ್ರತಿ ಕಣ್ಣಿನ ಪ್ರತಿಫಲನದೊಂದಿಗೆ, ಕಾಮನಬಿಲ್ಲಿನ ಸಂಗೀತದೊಂದಿಗೆ... ಹೀಗೆ ದಿನಕ್ಕೊಂದು ರೀತಿಯಲ್ಲಿ ಗರಿಗೆದರುತ್ತಿದ್ದ ಕಾಮನೆಗಳು ಮತ್ತು ನಿರೀಕ್ಷೆಗಳು ಕರಗಿಹೋಗಿ ಮಣ್ಣಿನ ಪದರಗಳಲ್ಲಿ ಕಾಡುವ ತೇವವಾಗಿ ಅಡಗಿ ಹೋದವು. ಅದಕ್ಕಾಗಿಯೇ ಇರಬೇಕು ನನಗೆ ಮಳೆಗಾಲವೆಂದರೆ ತುಂಬಾ ಇಷ್ಟವಾಗಿ ಹೋಯಿತು. ನವಿರಾಗಿ ಕಣ್ಣು ಮುಚ್ಚಿ ಆಕಾಶದತ್ತ ಮುಖ ಮಾಡಿದ ನನ್ನ ಮೋರೆಯನ್ನು ಮಳೆಹನಿಗಳು ಸ್ಪರ್ಶಿಸಿದಾಗ ಹರಿದು ಹೋಗುತ್ತಿದ್ದುದು ಕಣ್ಣೀರೋ ಮಳೆನೀರೋ ಒಂದೂ ಅರ್ಥವಾಗುತ್ತಿರಲಿಲ್ಲ.



ಆದರೆ, ಸುರಯ್ಯ ಆಂಟಿಯ ನೀರವ ಮೌನ ಹಲವು ಹತ್ತು ದಿಕ್ಕುಗಳಿಂದ ಮಾರ್ದನಿಸುತ್ತಿತ್ತು. ಆಕೆಯ ಆಗಮನ, ನಗು ಉಲ್ಲಾಸ ಉಡುಗೊರೆಗಳು ಕ್ರಮೇಣ ಕಡಿಮೆಯಾಗತೊಡಗಿದವು. ಮದುವೆಯ ದಿನಾಂಕವೆಂಬುದು ಮರೀಚಿಕೆಯಾಗತೊಡಗಿತು.

ಕುಟುಂಬದ ಅನೇಕ ಹಿರಿಯರ ಮೋರೆಯಲ್ಲಿ ಕಾರ್ಮೋಡ ತುಂಬಿದ್ದು 'ದಾಲ್ ಮೆ ಕುಚ್ ಕಾಲಾ ಹೈ' ಎಂಬ ಸಂದೇಶವನ್ನು ಎಲ್ಲೆಡೆ ವಿಸ್ತರಿಸತೊಡಗಿತು. ಹೌದು, ಆರು ತಿಂಗಳ ಅವಧಿಯಲ್ಲಿಯೇ ಸುರಯ್ಯ ಆಂಟಿಯ ಮೆದುಳಿನ ಕ್ಯಾನ್ಸರ್ ವೇಗವಾಗಿ ವ್ಯಾಪಿಸಿತು. ನಾನು ಆಕೆಯನ್ನು ನೋಡಲೇಬೇಕು ಎಂದು ಹಟಹಿಡಿದು ರಂಪಮಾಡಿ ಅತ್ತು ಕರೆದು ಗಲಾಟೆಮಾಡಿದಾಗ ಅಮ್ಮ ನನ್ನ ಎರಡೂ ಕೈಗಳನ್ನು ಬಲವಾಗಿ ತನ್ನ ಎಡಗೈಯಲ್ಲಿ ಹಿಡಿದು ನನ್ನನ್ನು ಕುರ್ಚಿಯ